**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**ಸಿ.ಸಿ.ನಂ: 377/2016**

**ಸಿ ಡಬ್ಲ್ಯೂ ಃ 3, ಪಿ ಡಬ್ಲ್ಯೂಃ 2**

| | |
|---|---|
| **ಸಾಕ್ಷಿದಾರರ ಹೆಸರು** | ಃ ಯುನುಸ್ |
| ತಂದೆ **ಹೆಸರು** | ಃ ಗಫುರ್ ಸಾಬ್ |
| **ವಯಸ್ಸು** | ಃ **45 ವರ್ಷ** |
| **ವೃತ್ತಿ** | ಃ ವ್ಯವಾಸಯ |
| **ವಾಸ** | ಃ ತೆಕ್ಕಲಕೋಟೆ, ಸಿರುಗುಪ್ಪ ತಾಲುಕ್ |

**ಪ್ರಮಾಣ ಮಾಡಿದ ದಿನಾಂಕಃ 04.11.2022.**
**ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.**

ಚಾಸಾ **1, 2 4** ಮತ್ತು **5** ನನಗೆ ಗೊತು. ನನಗೆ ಆರೋಪಿ ಗೊತ್ತು. ಸುಮಾರು **5-6** ವರ್ಷಗಳ ಹಿಂದೆ ನಾನು, ಚಾಸಾ **2** ಮತ್ತು **4** ಸಿರುಗುಪ್ಪ ಪಟ್ಟಣಕ್ಕೆ ಬಂದಿದ್ದೆವು. ಚಾಸಾ **5** ನಮ್ಮ ಸ್ನೇಹಿತರು ಇರುವುದರಿಂದ ಮಾತನಾಡಿಸಲು ಅವರ ಮನೆಗೆ ನಾವು ಹೋಗಿದ್ದೆವು. ಆಗ ಮನೆಯಲ್ಲಿ ಚಾಸಾ **5** ರ ಹೆಂಡತಿ ಮಾತ್ರ ಇದ್ದರು ಅವರು ನಮಗೆ ಕುಡಿಯಲು ಟೀ ಕೊಟ್ಟರು. ಆಗ ಯಾರೋ ಹೊರಗಿನಿಂದ ಚಾಸಾ **5** ರ ಹೆಂಡತಿಯನ್ನು ಕೂಗಿದರು ಆಗ ಚಾಸಾ **5** ರ ಹೆಂಡತಿ ಮನೆಯಿಂದ ಹೊರಗಡೆ ಹೋದರು **5-6** ನಿಮಿಷಗಳ ನಂತರ ಹೊರಗಡೆಯಿಂದ ಗಲಾಟೆ ಶಬ್ದ ಕೇಳಿತು, ಆಗ ನಾವು ಹೊರಗಡೆ ಹೋಗಿ ನೋಡಿದಾಗ ಈ ಪ್ರಕರಣದ ಆರೋಪಿ ಚಾಸಾ **5** ರ ಹೆಂಡತಿ ಜೊತೆ ಗಲಾಟೆ ಮಾಡುತಿದ್ದರು. ಆಗ ನಾವು ಜಗಳ ಬಿಡಿಸಿ ಆರೋಪಿಗೆ ಬದ್ದಿವಾದ ಹೇಳಿ ಈ ರೀತಿ ಮಾಡಬಾರದು ಎಂದು ಹೇಳಿ ಕಳುಹಿಸಿದೆವು. ನಂತರ ನಾವು ನಮ್ಮ ಮನೆಗೆ ಹೋದೆವು ಘಟನೆ ನಡೆದ **15** ದಿನಗಳ ನಂತರ ಪೋಲಿಸರು ಕರೆದು ನನ್ನ ಹೇಳಿಕೆ ಪಡೆದಿರುತ್ತಾರೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದುಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ ಇದೆ**

**ಜೆ ಎಂ ಎಫ್ ಸಿ ಸಿರುಗುಪ್ಪ.**